**ಇಂದು ದಿಃ06.09.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.**

**ಪಾಟೀ ಸವಾಲುಃ ಎದುರುದಾರರ ಪರ ಶ್ರೀ.ಬಿ.ಜಿ.ಕೆ. ವಕೀಲರಿಂದಃ**

ಅಪಘಾತವನ್ನು ನಾನು ನೋಡಿಲ್ಲ. ಅಪಘಾತದ ವಿವರವನ್ನು ನನ್ನ ಭಾವ ಕಾಳಮರೀಗೌಡರು ಹೇಳಿದ್ದಾರೆ. ಅಪಘಾತವಾದ ಜಾಗದಲ್ಲಿ ಕಾಳಮರೀಗೌಡರು ಇದ್ದರು. ಅಪಘಾತದ ಬಗ್ಗೆ ಕಾಸಮರೀಗೌಡರು ಪೊಲೀಸರಿಗೆ ದೂರು ಕೊಟ್ಟಿದ್ದಾರೆ. ಮಹಿಂದ್ರಾ ಬೊಲೆರೊ ವಾಹನದಿಂದ ಅಪಘಾತವಾಗಿದೆ. ಅದೇ ವಾಹನದಿಂದ ಅಪಘಾತವಾಗಿರುವ ಬಗ್ಗೆ ನಮ್ಮ ಭಾವ ಹೇಳಿದ್ದಾರೆ. ಆ ಜಾಗದಲ್ಲಿ ನಮ್ಮ ಭಾವ ಇರಲಿಲ್ಲ ಆದರೂ ಸಹ ಪರಿಹಾರ ಪಡೆಯಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಯಜಮಾನರು ವ್ಯವಸಾಯ ಮಾಡುತ್ತಿದ್ದರು. ಅಪಘಾತವಾದ ರಸ್ತೆಯ ವಿಸ್ತೀರ್ಣ ಗೊತ್ತಿಲ್ಲ. ಅಪಘಾತ ರಸ್ತೆಯ ಮಧ್ಯ ಭಾಗದಲ್ಲಿ ಆಗಿತ್ತು ಅದಕ್ಕೆ ನನ್ನ ಯಜಮಾನರೇ ಕಾರಣ ಎಂದರೆ ಸುಳ್ಳು. ಅಪಘಾತವನ್ನು ನಾನು ನೋಡಿಲ್ಲದ ಕಾರಣ ಸುಳ್ಳು ಪ್ರಮಾಣ ಪತ್ರ ಹಾಕಿದ್ದೇನೆ ಎಂದರೆ ಸರಿಯಲ್ಲ. ನನ್ನ ಯಜಮಾನರಿಗೆ ಚಾಲನಾ ಪರವಾನಗಿ ಮತ್ತು ಅವರು ಓಡಿಸುತ್ತಿದ್ದ ವಾಹನಕ್ಕೆ ಇನ್ಸುರೆನ್ಸ ಇತ್ತು ಅದನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ನಮ್ಮ ಕುಟುಂಬದ ಪಡಿತರ ಚೀಟಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ. ನನ್ನ ಯಜಮಾನರ ಜನ್ಮ ದಿನಾಂಕ ಸರಿಯಾಗಿ ಗೊತ್ತಿಲ್ಲ, 38 ವರ್ಷ ಆಗಿತ್ತು. ನನ್ನ ಯಜಮಾನರಿಗೆ 45 ವರ್ಷ ಆಗಿತ್ತು ಆದ್ದರಿಂದ ಅವರ ವಯಸ್ಸು ಮರೆ ಮಾಚುವ ಉದ್ದೇಶದಿಂದ ದಾಖಲೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನನ್ನ ಯಜಮಾನರ ಆಧಾರ್ ಕಾರ್ಡ್ ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ. ನನ್ನ ಯಜಮಾನರಿಗೆ ತಿಂಗಳಿಗೆ ರೂ.30,000/- ಆದಾಯವಿತ್ತು ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ

ಆರ್.ಟಿ.ಸಿ ಪ್ರಕಾರ ನನ್ನ ಯಜಮಾನರಿಂದ ನನ್ನ ಹೆಸರಿಗೆ ಜಮೀನು ಬಂದಿದೆ. ನನ್ನ ಯಜಮಾನರು ಮೃತಪಟ್ಟಿರುವುದರಿಂದ ನಮಗೆ ಯಾವುದೇ ಆರ್ಥಿಕ ನಷ್ಟ ಉಂಟಾಗಿಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ದಾಖಲೆಯ ಪ್ರಕಾರ ಪಿ.ಎಂ. ವರದಿಯ ಪ್ರಕಾರ ನನ್ನ ಯಜಮಾನರು ಹೆಲ್ಮೆಟ್ ಹಾಕದೇ ವಾಹನ ಓಡಿಸುತ್ತಿದ್ದರು ಎಂದರೆ ಸರಿಯಲ್ಲ. ನನ್ನ ಯಜಮಾನರ ನಿರ್ಲಕ್ಷ್ಯತೆಯಿಂದಲೇ ಅವರು ಮೃತಪಟ್ಟಿದ್ದಾರೆ ಎಂದರೆ ಸರಿಯಲ್ಲ. ನಾವು ನಮ್ಮ ಯಜಮಾನರ ಮೇಲೆ ಅವಲಂಬಿತರಾಗಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಯಜಮಾನರ ತಪ್ಪಿನಿಂದ ಅಪಘಾತವಾಗಿರುವುದರಿಂದ ನಾವು ಪರಿಹಾರ ಪಡೆಯಲು ಬಾಧ್ಯರಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

**ಓ.ಹೆ.ಕೆ.ಸರಿ ಇದೆ.**

**ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ**